ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 2117/2019

ಚಾಸಾ: 3 ಪ್ರಾಸಾ:3

ದಿನಾಂಕ: 19/08/2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮೊಹಮ್ಮದ್ ಸಬೀರ್ |
| ತಂದೆಯ ಹೆಸರು | : | ಮೊಹಮ್ಮದ್ ಮುಸುಲಿಯಾರ್ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಮಸೀದಿಯಲ್ಲಿ ಕೆಲಸ |
| ವಾಸ ಸ್ಥಳ | : | ಉಡುಪಿ. |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಮೃತ ಮೊಹಮ್ಮದ್ ಸುಹೇಲ್ ನನಗೆ ಪರಿಚಯಸ್ಥರು. ಚಾಸಾ.4 ಮತ್ತು 5ರವರು ಪರಿಚಯ ಇದೆ. ದಿನಾಂಕ 20.04.2019 ರಂದು ನಾವು ದಾವಣಗೆರೆಯಿಂದ ಚಾಸ.4, 5, ಮೃತ ಮೊಹಮ್ಮದ್ ಸಹೇಲ್ ಮತ್ತು ನಾನು ಉಡುಪಿಗೆ ಹೋಗುತ್ತಿದ್ದಾಗ ನ್ಯಾಯಾಲಯದ ಮುಂದಿರುವ ಆರೋಪಿ ಸದ್ರಿ ವಾಹನದ ಚಾಲಕನಾಗಿದ್ದು, ಅದು ಬುಲೆರೋ ವಾಹನವಾಗಿರುತ್ತದೆ. ನಾವು ತ್ರಾಸಿಯಲ್ಲಿ ಕುಂದಾಪುರದ ಕಡೆಗೆ ಬರುತ್ತಿದ್ದಾಗ ಎದುರುಗಡೆಯಿಂದ ಒಂದು ಲಾರಿ ಏಕಾಏಕಿ ಬಂದಿದ್ದು, ಅದನ್ನು ತಪ್ಪಿ ಸಲು ನಮ್ಮ ವಾಹನದ ಚಾಲಕ ವಾಹನವನ್ನು ತೀರಾ ಎಡಕ್ಕೆ ತಿರುಗಿಸಿದ್ದು, ನಮ್ಮ ಕಾರು ಪಲ್ಟಿಯಾಗಿರುತ್ತದೆ. ಅದೇ ಸಮಯಕ್ಕೆ ರಸ್ತೆಯಲ್ಲಿ ಹೋಗುತ್ತಿದ್ದ ಒಂದು ಬೈಕ್ ಗೆ ಡಿಕ್ಕಿಯಾಗಿರುತ್ತದೆ. ನಮ್ಮ ವಾಹನವನ್ನು ಅಪಘಾತದಿಂದ ತಪ್ಪಿ

ಸಲು ನಮ್ಮ ಚಾಲಕ ತೀರಾ ಎಡಕ್ಕೆ ವಾಹನವನ್ನು ಚಲಾಯಿಸಿದ್ದರಿಂದ ಲಾರಿಗೆ ಡಿಕ್ಕಿಯಾಗುತ್ತಿದ್ದ ಅಪಘಾತವು ತಪ್ಪಿರುತ್ತದೆ. ಇಲ್ಲವಾದಲ್ಲಿ ಲಾರಿ ನಮ್ಮ ಗಾಡಿಗೆ ಡಿಕ್ಕಿಹೊಡೆಯುವ ಸಾಧ್ಯತೆ ಇತ್ತು. ಆದರೆ ನಮ್ಮ ಕಾರಿನಲ್ಲಿದ್ದ ಮೊಹಮ್ಮದ್ ಸುಹೇಲ್ ರವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಅಪಘಾತದ ದಿನ ನಾನು ಗಾಯಗೊಂಡಿರುತ್ತೇನೆ. ನನ್ನ ಎಡಗೈಯ ಮೂರು ಬೆರಳುಗಳು ಕತ್ತರಿಸಿರುತ್ತದೆ. ದ್ವಿಚಕ್ರ ವಾಹನದ ಸಹಸವಾರ ಭರತ್ ರವರು ಸಹ ಅಪಘಾತದಿಂದ ಮೃತಪಟ್ಟಿರುತ್ತಾರೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬುಲೆರೋ ಗಾಡಿಯ ಪೋಟೋವನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ.8 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ಮೇಲೆ ಹೇಳಿದ ದಿನ ಆರೋಪಿಯು ಅತೀವೇಗ ಹಾಗೂ ಅಜಾಗರೂಕತೆಯಿಂದ ಕಾರನ್ನು ಚಲಾಯಿಸಿ ಎದುರುಗಡೆ ಇದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿಹೊಡೆದ ಕಾರಣ ಅದು ಪ್ಲೈಓವರ್ ನ ಗೋಡೆ ಡಿಕ್ಕಿ ಹೊಡೆದು ಅದರ ಸಹಸವಾರನ ತಲೆ ಗೋಡೆಗೆ ಹೊಡೆದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಮೇಲೆ ತೋರಿಸಿದ ದ್ವಿಚಕ್ರ ವಾಹನಕ್ಕೂ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿ ಸದ್ರಿ ವಾಹನವನ್ನು ನಾನು ನೋಡಿಲ್ಲ ಎಂದು ನುಡಿದಿರುತ್ತಾರೆ. ಸದ್ರಿ ದ್ವಿಚಕ್ರ ವಾಹನದ ಹಿಂಬದಿ ಸವಾರರಿಗೆ ಗಾಯವಾಗಿರುತ್ತದೆ ಎಂದರೆ ನನಗೆ ತಿಳಿದಿಲ್ಲ. ಆರೋಪಿ ಮೊದಲಿನಿಂದ ನಮ್ಮ ಮಸೀದಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಇದೇ ವಿಚಾರವಾಗಿ ದಿನಾಂಕ 24.04.2019 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ.9 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ರೀತಿಯಲ್ಲಿ ಯಾವುದೇ ಲಾರಿ ನಮ್ಮ ವಾಹನದ ಎದುರುಗಡೆ ಬಂದಿರದೇ ಇದ್ದರೂ ಆರೋಪಿಯ ತಪ್ಪನ್ನು ಮರೆಮಾಚಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ,</u>**

ನನಗೆ ಈಗ ಕನ್ನಡ ಸ್ವಲ್ಪ ಓದಲು-ಬರೆಯಲು ಬರುತ್ತದೆ. ಅಪಘಾತವಾದ ಕಾಲಕ್ಕೆ ಬರುತ್ತಿರಲಿಲ್ಲ. ಅಪಘಾತವಾದ ನಂತರ ಎಂದಿಗೂ ನನ್ನ ಮತ್ತು ಪೊಲೀಸರ ನಡುವೆ ಸಂಪರ್ಕ ಅಥವಾ

ಸಂಭಾಷಣೆ ನಡೆದಿಲ್ಲ. ನಾನು ಅವರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಅಪಘಾತವಾದ ದಿನ ನಾನು ಚಾಲಕನ ಪಕ್ಕದಲ್ಲಿ ಕುಳಿತಿದ್ದೆ. ಸದ್ರಿ ವಾಹನದಲ್ಲಿ ಮುಂಭಾಗಕ್ಕೆ ಎರಡು ಸೀಟುಗಳು ಮಾತ್ರ ಇರುತ್ತದೆ. ಸದ್ರಿ ದಿನ ನಮ್ಮ ವಾಹನದ ಚಾಲಕ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದರು. ಆತ ಸುಮಾರು 50 ಕಿ.ಮೀ ವೇಗದ ಮಿತಿಯಲ್ಲಿ ಹೋಗುತ್ತಿದ್ದರು. ಎದುರುಗಡೆಯಿಂದ ಲಾರಿ ಏಕಾಏಕಿ ನಮ್ಮ ಭಾಗಕ್ಕೆ ಬಂದಿರುತ್ತಾರೆ. ಅದನ್ನು ತಪ್ಪಿಸಿಕೊಳ್ಳಲು ನಮ್ಮ ವಾಹನದ ಚಾಲಕ ಬ್ರೇಕ್ ಹಾಕಿ ಎಡಕ್ಕೆ ತಿರುಗಿಸಿರುತ್ತಾರೆ. ಆ ರೀತಿ ಏಕಾಏಕಿ ನಮ್ಮ ಎಡಭಾಗಕ್ಕೆ ಬಂದದ್ದು ಲಾರಿ ಚಾಲಕನ ತಪ್ಪಾಗಿರುತ್ತದೆ. ಆ ರೀತಿ ಆತ ಬಾರದೇ ಇದ್ದರೆ ಯಾವುದೇ ಅಪಘಾತವಾಗುತ್ತಿರಲಿಲ್ಲ. ಆ ಕೂಡಲೇ ನಮ್ಮ ಕಾರು ಎಡಭಾಗಕ್ಕೆ ಪಲ್ಟಿಯಾಗಿರುತ್ತದೆ. ಅದರ ಪರಿಣಾಮ ನನ್ನ ಕೈ ವಾಹನದ ಅಡಿಯಲ್ಲಿ ಸಿಲುಕಿಕೊಂಡಿರುತ್ತದೆ. ಬಿದ್ದ ನಂತರ ನಮ್ಮ ವಾಹನ ಮುಂದೆ ಹೋಗುತ್ತಿದ್ದ ದ್ವಿಚಕ್ರ ವಾಹನಕ್ಕೆ ತಾಗಿತು ಎಂದರೆ ಸರಿ. ಅದರಿಂದ ದ್ವಿಚಕ್ರ ವಾಹನವು ನಿಯಂತ್ರಣ ತಪ್ಪಿ ಬಿತ್ತು ಎಂದರೆ ಸರಿ. ಆ ವೇಳೆಗೆ ಪೊಲೀಸರು ನನ್ನನ್ನು ವಿಚಾರಿಸಿದ ಪಕ್ಷದಲ್ಲಿ ಅಪಘಾತವಾಗಲು ಲಾರಿ ಕಾರಣ ಎಂದು ಹೇಳುತ್ತಿದ್ದೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**